D) Imprisonment for a term, which may extend to six months or fine, which may extend to twice the amount of cheque or with both

ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ ಕಲಂ 138ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧಕ್ಕೆ ತಪ್ಪಿತಸ್ಥ ಎಂದು ಕಂಡಬಂದ ಆರೋಪಿಗೆ ವಿಧಿಸಬಹುದಾದ ಶಿಕ್ಷೆ ಏನು?

ಎ) ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸೆರೆವಾಸ ಅಥವಾ ಚೆಕ್ಕಿನ ಎರಡು ಪಟ್ಟು ಮೊತ್ತದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡೂ

ಬಿ) ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸೆರೆವಾಸ ಅಥವಾ ಚೆಕ್ಕಿನ ಎರಡು ಪಟ್ಟು ಮೊತ್ತದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡೂ

ಸಿ) ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಸೆರೆವಾಸ ಅಥವಾ ಚೆಕ್ಕಿನ ಎರಡು ಪಟ್ಟು ಮೊತ್ತದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡೂ

ಡಿ) ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸೆರೆವಾಸ ಅಥವಾ ಚೆಕ್ಕಿನ ಎರಡು ಪಟ್ಟು ಮೊತ್ತದವರೆಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡೂ

55 Which one of the following is correctly matched according to the Code of Criminal Procedure, 1973?
A) Appeal from convictions – Sec.374
B) Appeal in petty cases – Sec.375
C) Appeal by State Government – Sec.376
D) Appeal against acquittal – Sec.377

ಈ ಕೆಳಗಿನ ಪೈಕಿ ಯಾವುದೊಂದು ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಅಡಿಯಲ್ಲಿ ಸರಿಯಾದ ಹೊಂದಾಣಿಕೆಯಾಗಿದೆ?
ಎ) ಕಲಂ 374 – ಶಿಕ್ಷೆ ವಿಧಿಸಿದ ವಿರುದ್ಧ ಮೇಲ್ಮನವಿ
ಬಿ) ಕಲಂ 375 – ಸಣ್ಣ ಮೊಕದ್ದಮೆಗಳಲ್ಲಿ ಮೇಲ್ಮನವಿ
ಸಿ) ಕಲಂ 376 – ರಾಜ್ಯ ಸರ್ಕಾರದ ಮೇಲ್ಮನವಿ
ಡಿ) ಕಲಂ 377 – ನಿರಪರಾಧಿಯೆಂಬ ನಿರ್ಣಯದ ವಿರುದ್ಧ ಮೇಲ್ಮನವಿ

56 If the suit is dismissed for non-appearance of both the parties, application for setting the said order and for restoration of the suit has to be filed under ______________ of the Code of Civil Procedure, 1908.
A) Order 9 Rule 13
B) Order 9 Rule 9
C) Order 9 Rule 4
D) none of the above

ಉಭಯ ಪಕ್ಷಗಾರರ ಗೈರು ಹಾಜರಿಯ ಕಾರಣ ದಾವೆಯನ್ನು ವಜಾ ಮಾಡಿದಲ್ಲಿ ಆ ಆದೇಶವನ್ನು ರದ್ದುಗೊಳಿಸಿ ದಾವಾವನ್ನು ಪುನರ್ ಸ್ಥಾಪನೆಗೊಳಿಸಲು ಅರ್ಜಿಯನ್ನು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ______ ಅಡಿಯಲ್ಲಿ ಸಲ್ಲಿಸಬೇಕು.
ಎ) ಕ್ರಮಾದೇಶ 9 ನಿಯಮ 13
ಬಿ) ಕ್ರಮಾದೇಶ 9 ನಿಯಮ 9
ಸಿ) ಕ್ರಮಾದೇಶ 9 ನಿಯಮ 4
ಡಿ) ಮೇಲಿನ ಯಾವುದು ಅಲ್ಲ

57 As per the Hindu Marriage Act, 1955, a marriage that has not been consummated owing to the impotence of the respondent is ______
A) voidable marriage
B) void marriage
C) illegal marriage
D) invalid marriage

ಹಿಂದೂ ವಿವಾಹ ಕಾಯಿದೆ, 1955ರ ಪ್ರಕಾರ ಎದುರುದಾರನ ನಪುಂಸಕತೆಯ ಕಾರಣ ಪರಿಪೂರ್ಣಗೊಂಡಿರಲಾಗದ ವಿವಾಹವು _____ ಆಗುತ್ತದೆ.
ಎ) ಶೂನ್ಯಗೊಳಿಸಬಹುದಾದ ವಿವಾಹ
ಬಿ) ಶೂನ್ಯ ವಿವಾಹ
ಸಿ) ಕಾನೂನುಬಾಹಿರ ವಿವಾಹ
ಡಿ) ಅಮಾನ್ಯ ವಿವಾಹ

58 As per Sunni Law, a bequest can be made in favour of a child in the womb, provided said child is born alive within _______ from the date of the Will.
A) six months.
B) seven months.
C) eight months.
D) nine months.

ಸುನ್ನಿ ಕಾನೂನಿನ ಪ್ರಕಾರ ಗರ್ಭದಲ್ಲಿರುವ ಮಗುವಿನ ಪರವಾಗಿ ಒಂದು ಉಯಿಲನ್ನು ಮಾಡಬಹುದು ಆದರೆ, ಆ ಮಗುವು ಉಯಿಲು ನಾಮೆಯನ್ನು ಬರೆದ _______ ಜೀವಂತವಾಗಿ ಹುಟ್ಟಬೇಕು.
ಎ) ಆರು ತಿಂಗಳೊಳಗೆ.
ಬಿ) ಏಳು ತಿಂಗಳೊಳಗೆ.
ಸಿ) ಎಂಟು ತಿಂಗಳೊಳಗೆ.
ಡಿ) ಒಂಭತ್ತು ತಿಂಗಳೊಳಗೆ.

59 Which word among the following is most similar in meaning to the English word “Fatigue”?
A) tiredness
B) unconcerned
C) careless
D) stubborn

ಈ ಕೆಳಗಿನ ಪೈಕಿ ಯಾವುದು "ಫಟಿಗ್ಯೊ" ಎಂಬ ಆಂಗ್ಲ ಪದಕ್ಕೆ ಅತ್ಯಂತ ಸಮಾನವಾದ ಅರ್ಥ ನೀಡುವ ಪದವಾಗಿರುತ್ತದೆ?
ಎ) ಆಯಾಸಗೊಂಡಿರುವುದು
ಬಿ) ಕಾಳಜಿಯಿಲ್ಲದಿರುವುದು
ಸಿ) ಅಸಡ್ಡೆ
ಡಿ) ಮೊಂಡುತನ

60 As per the Specific Relief Act, 1963 Specific Relief can be granted ____________
A) for the purpose of enforcing individual civil rights
B) for the purpsoe of enforcing penal law
C) both A) and B)
D) none of the above

ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಪ್ರಕಾರ ನಿರ್ದಿಷ್ಟ ಪರಿಹಾರವನ್ನು __________ ನೀಡಬಹುದು.
ಎ) ವೈಯಕ್ತಿಕ ಸಿವಿಲ್ ಹಕ್ಕುಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ
ಬಿ) ದಂಡನಾ ಕಾನೂನನ್ನು ಜಾರಿಗೆ ತರುವ ಉದ್ದೇಶಕ್ಕಾಗಿ
ಸಿ) ಎ) ಮತ್ತು ಬಿ) ಎರಡೂ
ಡಿ) ಮೇಲಿನ ಯಾವುದು ಅಲ್ಲ

61 Where a Magistrate has imposed a substantive sentence on the accused, the sentence of imprisonment in default of payment of fine shall not exceed __________ of the term of sentence, which Magistrate is competent to impose as punishment.

A) one fourth
B) one third
C) one half
D) none of the above

ದಂಡಾಧಿಕಾರಿಯವರು ಆರೋಪಿಗೆ ಸ್ವತಂತ್ರ್ಯ ದಂಡಾದೇಶವನ್ನು ವಿಧಿಸಿದ್ದಾಗ ದಂಡ ತೆರಲು ತಪ್ಪಿದರ ಬಗ್ಗೆ ವಿಧಿಸಲಾಗುವ ಕಾರಾವಾಸದ ಅವಧಿಯು ಆ ದಂಡಾಧಿಕಾರಿಯವರು ಎಷ್ಟು ಅವಧಿಯ ಕಾರಾವಾಸದ ದಂಡಣೆಯನ್ನು ವಿಧಿಸಲು ಸಮರ್ಥರಾಗಿರುತ್ತಾರೆಯೊ ಅದರ __________ ಅವಧಿಯನ್ನು ಮೀರತಕ್ಕದಲ್ಲ.

ಎ) ನಾಲ್ಕನೆ ಒಂದು ಭಾಗದ
ಬಿ) ಮೂರನೆ ಒಂದು ಭಾಗದ
ಸಿ) ಅರ್ಧ ಭಾಗದ
ಡಿ) ಮೇಲಿನ ಯಾವುದು ಅಲ್ಲ

62 Which Act provides for presumption regarding culpable mental state of an accused?

A) Scheduled Caste and Schedules Tribe (Prevention of Atrocities) Act, 1989
B) Prevention of Corruption Act, 1988
C) Narcotic Drugs and Psychotropic Substances Act, 1985
D) Protection of Children from Sexual Offences Act, 2012

ಯಾವ ಕಾಯಿದೆಯು ಆರೋಪಿಯ ಅಪರಾಧಿಕ ಮಾನಸಿಕ ಸ್ಥಿತಿಯ ಕುರಿತು ಪೂರ್ವಭಾವನೆ ಹೊಂದುವ ಬಗ್ಗೆ ತಿಳಿಸುತ್ತದೆ?

ಎ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ನಿಷೇಧ) ಕಾಯಿದೆ, 1989
ಬಿ) ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988
ಸಿ) ಮಾದಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮ, 1985
ಡಿ) ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ, 2012

63 Which among the following does not fall within the General Exceptions under the Indian Penal Code?

A) act of a person of unsound mind.
B) Act of person drunken voluntarily.
C) Accident while doing a lawful act.
D) Act of judge when acting judicially.

ಈ ಕೆಳಗಿನ ಪೈಕಿ ಯಾವುದು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿನ ಸಾಮಾನ್ಯ ಅಪವಾದಕ್ಕೆ ಸೇರುವುದಿಲ್ಲ?

ಎ) ಅಸ್ವಸ್ಥ ಮನಸ್ಸಿನ ವ್ಯಕ್ತಿಯ ಕೃತ್ಯ.
ಬಿ) ತನ್ನ ಇಚ್ಛೆಯಿಂದ ಮಧ್ಯಪಾನ ಮಾಡಿದ ವ್ಯಕ್ತಿಯ ಕೃತ್ಯ.
ಸಿ) ಕಾನೂನುಬದ್ಧ ಕೃತ್ಯ ಮಾಡುವಾಗ ಆದ ಆಕಸ್ಮಿಕ.
ಡಿ) ಕಾನೂನುಬದ್ಧ ಕೃತ್ಯ ಮಾಡುತ್ತಿರುವಾಗ ನ್ಯಾಯಾಧೀಶನು ಮಾಡಿರುವ ಕೃತ್ಯ.

64 Whether an accused belong to a Scheduled Caste be convicted for any of the offences under Section 3 of the Scheduled Caste and Schedules Tribe (Prevention of Atrocities) Act, 1989, when victim thereof happens to be a Scheduled Tribe?

A) No
B) Yes
C) May be
D) none of the above

ದೌರ್ಜನ್ಯಕ್ಕೆ ಒಳಪಟ್ಟ ವ್ಯಕ್ತಿಯು ಪರಿಶಿಷ್ಟ ಪಂಗಡಕ್ಕೆ ಸೇರಿದವನಾಗಿದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯಗಳ ನಿಷೇಧ) ಕಾಯಿದೆ, 1989ರ ಕಲಂ 3ರ ಅಡಿಯಲ್ಲಿನ ಯಾವುದೇ ಅಪರಾಧಗಳಿಗೆ ಪರಿಶಿಷ್ಟ ಜಾತಿಗೆ ಸೇರಿದ ಓರ್ವ ಆರೋಪಿಯನ್ನು ಶಿಕ್ಷೆಗೆ ಒಳಪಡಿಸಬಹುದೇ?

ಎ) ಇಲ್ಲ
ಬಿ) ಹೌದು
ಸಿ) ಒಳಪಡಿಸಲುಬಹುದು
ಡಿ) ಮೇಲಿನ ಯಾವುದು ಅಲ್ಲ

65 As per Section 320 of the Code of Criminal Procedure 1973, Voluntary Causing Grievous Hurt, an offence punishable under Section 325 of the Indian Penal Code is ______

A) non compoundable offence
B) compoundable offence
C) offence compoundable with the permission of the Court
D) none of the above

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 320ರ ಪ್ರಕಾರ ಭಾರತೀಯ ದಂಡ ಸಂಹಿತೆಯ ಕಲಂ 325ರ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಸ್ವ–ಇಚ್ಛೆಯಿಂದ ತೀವ್ರ ಗಾಯವನ್ನುಂಟುಮಾಡುವ ಅಪರಾಧ ________

ಎ) ರಾಜಿ ಮಾಡಲಾಗದ ಅಪರಾಧ
ಬಿ) ರಾಜಿ ಮಾಡಬಹುದಾದ ಅಪರಾಧ
ಸಿ) ನ್ಯಾಯಾಲಯದಿಂದ ಅನುಮತಿ ಪಡೆದು ರಾಜಿ ಮಾಡಬಹುದಾದ ಅಪರಾಧ
ಡಿ) ಮೇಲಿನ ಯಾವುದು ಅಲ್ಲ

66 A suit for mandatory injunction under Section 39 of the Specific Relief Act, 1963 is dismissed by holding that the plaintiff is not entitled for the discretionary relief. Can the plaintiff sue for damages in respect of such breach?

A) No. In the light of Section 41 of the above Act
B) Yes. In the light of Section 39(1) of the above Act
C) No. In the light of Section 40(3) of the above Act
D) Yes. In the light of Section 40(2) of the above Act

ವಾದಿಯು ವಿವೇಚನಯುತ ಪರಿಹಾರಕ್ಕೆ ಅರ್ಹನಲ್ಲ ಎನ್ನುವ ಕಾರಣಕ್ಕಾಗಿ ನಿರ್ದಿಷ್ಟ ಪರಿಹಾರ ಅಧಿನಿಯಮ, 1963ರ ಅಡಿಯಲ್ಲಿ ಸಲ್ಲಿಸಿದ ಆಜ್ಞಾಪಕ ನಿರ್ಭಂದಕಾಜ್ಞೆಯನ್ನು ಕೋರಿದ ದಾವೆಯನ್ನು ವಜಾಗೊಳಿಸಲಾಗಿತ್ತು. ವಾದಿಯು ಅದೇ ಭಂಗದ ಬಗ್ಗೆ ಹಾನಿ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಬಹುದೆ?

ಎ) ಆ ಕಾಯಿದೆಯ ಕಲಂ 41ರ ಪ್ರಕಾರ ಇಲ್ಲ
ಬಿ) ಆ ಕಾಯಿದೆಯ ಕಲಂ 39(1)ರ ಪ್ರಕಾರ ಹೌದು
ಸಿ) ಆ ಕಾಯಿದೆಯ ಕಲಂ 40(3)ರ ಪ್ರಕಾರ ಇಲ್ಲ
ಡಿ) ಆ ಕಾಯಿದೆಯ ಕಲಂ 40(2)ರ ಪ್ರಕಾರ ಹೌದು

67 Per curiam decision means:
A) a decision purely on facts
B) a decision purely on law
C) a decision on law and facts
D) a decision by a Court of multiple judges without identifying the name of the judge who wrote the opinion

ಪರ್ ಕ್ಯೂರಿಯಂ ತೀರ್ಪು ಅಂದರೆ:
ಎ) ಸಂಪೂರ್ಣವಾಗಿ ವಿಷಯಗಳ ಆಧಾರದ ಮೇಲಿನ ತೀರ್ಪು
ಬಿ) ಸಂಪೂರ್ಣವಾಗಿ ಕಾನೂನಿನ ಆಧಾರದ ಮೇಲಿನ ತೀರ್ಪು
ಸಿ) ವಿಷಯ ಮತ್ತು ಕಾನೂನು ಆಧಾರದ ತೀರ್ಪು
ಡಿ) ಅಭಿಪ್ರಾಯ ವ್ಯಕ್ತ ಪಡಿಸಿದ ನ್ಯಾಯಾಧೀಶರ ಹೆಸರನ್ನು ಗುರುತಿಸದೆ ಮಾಡಿರುವ ಬಹು ನ್ಯಾಯಾಧೀಶರ ನ್ಯಾಯಾಲಯದ ತೀರ್ಪು

68 Committal of the case to the Court of Sessions by the Magistrate after commencement of inquiry or trial shall be under ________

A) Section 209 of the Code of Criminal Procedure 1973
B) Section 323 of the Code of Criminal Procedure, 1973
C) either A) or B)
D) both A) and B)

ವಿಚಾರಣೆ ಅಥವಾ ಆರೋಪ ವಿಚಾರಣೆಯು ಪ್ರಾರಂಭವಾದ ನಂತರ ದಂಡಾಧಿಕಾರಿಯು ಪ್ರಕರಣವನ್ನು ಸತ್ರ ನ್ಯಾಯಾಲಯಕ್ಕೆ ಒಪ್ಪಿಸುವುದು ______ ಅಡಿಯಲ್ಲಿ.

ಎ) ಅಪರಾಧ ಪ್ರಕಿಯಾ ಸಂಹಿತೆ, 1973ರ ಕಲಂ 209ರ
ಬಿ) ಅಪರಾಧ ಪ್ರಕಿಯಾ ಸಂಹಿತೆ, 1973ರ ಕಲಂ 323ರ
ಸಿ) ಎ) ಅಥವಾ ಬಿ)
ಡಿ) ಎ) ಮತ್ತು ಬಿ) ಎರಡೂ

69 "No fault liability" means:
A) absolute liability even without any negligence or fault
B) liability for damage caused through negligence
C) liability for damage caused through fault
D) freedom from liability

"ನೋ ಫಾಲ್ಟ್ ಲಯಾಬಿಲಿಟಿ" ಎಂದರೆ:
ಎ) ಯಾವುದೇ ನಿರ್ಲಕ್ಷ್ಯ ಅಥವಾ ತಪ್ಪು ಇಲ್ಲದಿದ್ದರು ಸಂಪೂರ್ಣ ಹೊಣೆಗಾರಿಕೆ
ಬಿ) ನಿರ್ಲಕ್ಷ್ಯದ ಮೂಲಕ ಉಂಟಾದ ಹಾನಿಗೆ ಹೊಣೆಗಾರಿಕೆ
ಸಿ) ತಪ್ಪಿನ ಮೂಲಕ ಉಂಟಾದ ಹಾನಿಗೆ ಹೊಣೆಗಾರಿಕೆ
ಡಿ) ಹೊಣೆಗಾರಿಕೆಯಿಂದ ಬಿಡುಗಡೆ

70 For which of the following offence, death sentence can be awarded?
A) causing hurt by life convict while attempting to murder
B) Abetting the commission of suicide
C) dowry death
D) attempting to commit culpable homicide

ಈ ಕೆಳಗಿನ ಯಾವ ಅಪರಾಧಕ್ಕೆ ಮರಣ ದಂಡಣೆಯ ಶಿಕ್ಷೆಯನ್ನು ವಿಧಿಸಬಹುದು?
ಎ) ಜೀವಾವಧಿ ಶಿಕ್ಷೆಗೆ ಒಳಪಟ್ಟ ವ್ಯಕ್ತಿಯು ಕೊಲೆ ಮಾಡಲು ಪ್ರಯತ್ನ ಪಟ್ಟಾಗ ಮಾಡಿರುವ ಕ್ಷತಿ
ಬಿ) ಆತ್ಮಹತ್ಯೆಯ ಕೃತ್ಯಕ್ಕೆ ಪ್ರಚೋದಿಸುವುದು
ಸಿ) ವರದಕ್ಷಿಣೆ ಸಾವು
ಡಿ) ಅಪರಾಧಿಕ ಮಾನವ ಹತ್ಯೆಗೆ ಪ್ರಯತ್ನ

71 Defendant filed an appeal against the exparte decree passed against him and has withdrawn the appeal. Can he subsequently file an application under Order 9 Rule 13 of the Code of Civil Procedure, 1908 to set aside the exparte decree, before the same Court, which passed the decree?

A) No. when he has already filed appeal, he can not file such an application
B) Yes. Since he has withdrawn the appeal, he can file such an application
C) No. after filing the appeal, defendant looses his right to file such an application.
D) none of the above

ಪ್ರತಿವಾದಿಯು ತನ್ನ ವಿರುದ್ಧ ಆದ ಏಕಪಕ್ಷೀಯ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿ ಮತ್ತು ಅದನ್ನು ಹಿಂತೆಗೆದುಕೊಳ್ಳುತ್ತಾನೆ. ಆ ಬಳಿಕ ಆತನು ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕ್ರಮಾದೇಶ 9 ನಿಯಮ 13ರ ಅಡಿಯಲ್ಲಿ ಆ ಏಕಪಕ್ಷೀಯ ಡಿಕ್ರಿಯನ್ನು ರದ್ದುಗೊಳಿಸಲು ಡಿಕ್ರಿಯನ್ನು ಮಾಡಿದ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಬಹುದೇ?

ಎ) ಇಲ್ಲ. ಯಾಕೆಂದರೆ ಆತನು ಮೇಲ್ಮನವಿಯನ್ನು ಸಲ್ಲಸಿದ ನಂತರ ಅಂತಹ ಅರ್ಜಿಯನ್ನು ಸಲ್ಲಿಸಲಾಗುವುದಿಲ್ಲ.
ಬಿ) ಹೌದು. ಆತನು ಮೇಲ್ಮನವಿಯನ್ನು ಹಿಂತೆಗೆದುಕೊಂಡಿರುವುದರಿಂದ ಅಂತಹ ಅರ್ಜಿಯನ್ನು ಸಲ್ಲಿಸಬಹುದು.
ಸಿ) ಇಲ್ಲ. ಮೇಲ್ಮನವಿ ಸಲ್ಲಿಸಿದ ನಂತರ ಪ್ರತಿವಾದಿಯು ಅಂತಹ ಅರ್ಜಿಯನ್ನು ಸಲ್ಲಿಸುವ ಹಕ್ಕನ್ನು ಕಳೆದುಕೊಂಡಿರುತ್ತಾನೆ
ಡಿ) ಮೇಲಿನ ಯಾವುದು ಅಲ್ಲ

72 An accused was convicted by the Sessions Court and sentenced to undergo life imprisonment. The period of limitation to file appeal before the High Court is:

A) 30 days from the date of sentence
B) 60 days from the date of sentence
C) 90 days from the date of sentence
D) No limitation

ಓರ್ವ ಆರೋಪಿಯನ್ನು ಸತ್ರ ನ್ಯಾಯಾಲಯವು ತಪ್ಪಿತಸ್ಥ ಎಂದು ಪರಿಗಣಿಸಿ ಆತನಿಗೆ ಜೀವಾವಧಿ ಶಿಕ್ಷೆಯನ್ನು ವಿದಿಸಿತ್ತು. ಉಚ್ಚ ನ್ಯಾಯಾಲಯದ ಮುಂದೆ ಮೇಲ್ಮನವಿ ಸಲ್ಲಿಸಲು ಇರುವ ಕಾಲಮಿತಿಯ ಅವಧಿ:

ಎ) ಶಿಕ್ಷೆ ವಿಧಿಸಿದ ದಿನಾಂಕದಿಂದ 30 ದಿನಗಳು
ಬಿ) ಶಿಕ್ಷೆ ವಿಧಿಸಿದ ದಿನಾಂಕದಿಂದ 60 ದಿನಗಳು
ಸಿ) ಶಿಕ್ಷೆ ವಿಧಿಸಿದ ದಿನಾಂಕದಿಂದ 90 ದಿನಗಳು
ಡಿ) ಕಾಲಮಿತಿ ಇಲ್ಲ

73 The period of limitation provided for filing the appeal under the Code of Civil Procedure, 1908, before the District Court against the decree of Senior Civil Judge is:
A) thirty days
B) sixty days
C) ninety days
D) No limitation

ಹಿರಿಯ ಸಿವಿಲ್ ನ್ಯಾಯಾಧೀಶರು ಮಾಡಿರುವ ಡಿಕ್ರಿಯ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಇರುವ ಕಾಲಮಿತಿಯ ಅವಧಿ:
ಎ) ಮೂವತ್ತು ದಿನಗಳು
ಬಿ) ಅರವತ್ತು ದಿನಗಳು
ಸಿ) ತೊಂಬತ್ತು ದಿನಗಳು
ಡಿ) ಯಾವುದೇ ಕಾಲಮಿತಿ ಇಲ್ಲ

74 How many amendments have been made to the Constitution of India since its inception?
A) 106
B) 105
C) 104
D) 103

ಭಾರತೀಯ ಸಂವಿಧಾನಕ್ಕೆ ಅದು ಪ್ರಾರಂಭವಾದಾಗಿನಿಂದ ಒಟ್ಟು ಎಷ್ಟು ಬಾರಿ ತಿದ್ದುಪಡಿ ಮಾಡಲಾಗಿದೆ?
ಎ) 106
ಬಿ) 105
ಸಿ) 104
ಡಿ) 103

75 Who is the captain of Indian Women Cricket team, which won the Asia Cup recently?
A) Julan Goswami
B) Mithali Raj
C) Smriti Mandhana
D) Harmanpreet Kaur

ಇತ್ತೀಚೆಗೆ ನಡೆದ ಏಷ್ಯ ಕಪ್ಪನ್ನು ಜಯಿಸಿದ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಯಾರು?
ಎ) ಜುಲನ್ ಗೋಸ್ವಾಮಿ
ಬಿ) ಮಿತಾಲಿ ರಾಜ್
ಸಿ) ಸ್ಮೃತಿ ಮಂಧಾನ
ಡಿ) ಹರ್ಮನ್‌ಪ್ರೀತ್ ಕೌರ್

76 Which among the following is essential to make an agreement as a contract?
A) free consent of the parties
B) lawful consideration
C) lawful object
D) All the above

ಒಂದು ಒಪ್ಪಂದವನ್ನು ಕರಾರು ಎಂಬುದಾಗಿ ಮಾಡಲು ಈ ಕೆಳಗಿನ ಪೈಕಿ ಯಾವುದರ ಅವಶ್ಯಕತೆ ಇರುತ್ತದೆ?
ಎ) ಪಕ್ಷಗಾರರ ಅನಿರ್ಬಂದಿತ ಸಮ್ಮತಿ
ಬಿ) ಕಾನೂನುಬದ್ಧ ಪ್ರತಿಫಲ
ಸಿ) ಕಾನೂನುಬದ್ಧ ಉದ್ದೇಶ
ಡಿ) ಮೇಲಿನ ಎಲ್ಲವೂ

77 As per the Indian Easements Act, 1882, owner of the land on which the liability is imposed is called as __________
A) servient owner
B) dominant owner
C) either A) or B)
D) none of the above

ಭಾರತೀಯ ಅನುಭೋಗದ ಕಾಯಿದೆ, 1882ರ ಪ್ರಕಾರ, ಯಾವ ಜಮೀನಿನ ಮೇಲೆ ಹೊಣೆಗಾರಿಕೆ ವಿದಿಸಿದೆಯೊ ಅದರ ಮಾಲೀಕನನ್ನು _________ ಎನ್ನುತ್ತಾರೆ.
ಎ) ಅಧೀನ ಮಾಲೀಕ
ಬಿ) ಪ್ರಧಾನ ಮಾಲೀಕ
ಸಿ) ಎ) ಅಥವಾ ಬಿ)
ಡಿ) ಮೇಲಿನ ಯಾವುದು ಅಲ್ಲ

78 'A' who has been excluded from the possession of the suit property, wants to file a suit for partition and separate possession claiming 1/4th share over the suit property, market value of which is Rs.20,00,000/-. The Court fee payable by 'A' is _________

A) fixed Court fee of Rs.100/-
B) fixed Court fee of Rs.200/-
C) Court fee on Rs.5,00,000/-
D) Court fee on Rs.20,00,000/-

ದಾವಾ ಆಸ್ತಿಯ ಸ್ವಾಧೀನದಿಂದ ಹೊರಗಡೆ ಇರುವ 'ಎ' ಯು ರೂ.20,00,000/– ಮಾರುಕಟ್ಟೆ ಬೆಲೆ ಇರುವ ದಾವಾ ಆಸ್ತಿಯಲ್ಲಿ 1/4ನೇ ಹಿಸ್ಸೆ ಕೋರಿ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನಕ್ಕೆ ದಾವಾವನ್ನು ಸಲ್ಲಿಸಲು ಇಚ್ಛಿಸಿರುತ್ತಾನೆ. 'ಎ' ಪಾವತಿಸಬೇಕಾದ ನ್ಯಾಯಾಲಯ ಶುಲ್ಕ ______

ಎ) ಸ್ಥಿರ ನ್ಯಾಯಾಲಯದ ಶುಲ್ಕ ಆದ ರೂ.100/–
ಬಿ) ಸ್ಥಿರ ನ್ಯಾಯಾಲಯದ ಶುಲ್ಕ ಆದ ರೂ.200/–

ಸಿ) ರೂ.5,00,000/- ಮೇಲಿನ ನ್ಯಾಯಾಲಯದ ಶುಲ್ಕ
ಡಿ) ರೂ.20,00,000/- ಮೇಲಿನ ನ್ಯಾಯಾಲಯದ ಶುಲ್ಕ

79 When two persons are related by blood or adoption, wholly through males, it is called________
A) cognate
B) agnate
C) full blood
D) half blood

ಇಬ್ಬರು ವ್ಯಕ್ತಿಗಳು ಸಂಪೂರ್ಣವಾಗಿ ಪುರುಷರಿಂದ ರಕ್ತ ಸಂಬಂಧದ ಮೂಲಕ ಅಥವಾ ದತ್ತಕದ ಮೂಲಕ ಸಂಬಂಧಿಗಳಾಗಿದ್ದಲ್ಲಿ, ಅದನ್ನು ________ ಎನ್ನುತ್ತಾರೆ.
ಎ) ಕಾಗ್ನೇಟ್
ಬಿ) ಆಗ್ನೇಟ್
ಸಿ) ಫುಲ್ ಬ್ಲಡ್
ಡಿ) ಹಾಫ್ ಬ್ಲಡ್

80 As per the Registration Act, 1908, a Will may be presented for registration ________
A) within four months of its execution
B) within six months of its execution
C) within one year of its execution
D) at any time

ನೊಂದಣಿ ಕಾಯಿದೆ, 1908ರ ಪ್ರಕಾರ ಒಂದು ಉಯಿಲು ನಾಮೆಯನ್ನು ________ ನೊಂದಣಿಗೆ ಹಾಜರು ಪಡಿಸಬಹುದು.
ಎ) ಅದನ್ನು ಬರೆದ ನಾಲ್ಕು ತಿಂಗಳ ಒಳಗೆ
ಬಿ) ಅದನ್ನು ಬರೆದ ಆರು ತಿಂಗಳ ಒಳಗೆ
ಸಿ) ಅದನ್ನು ಬರೆದ ಒಂದು ವರ್ಷದ ಒಳಗೆ
ಡಿ) ಯಾವುದೇ ಸಮಯದಲ್ಲಿ

81 To exercise the power of converting a summons case to warrant case under Section 259 of the Code of Criminal Procedure, 1973, said summons case shall be relating to an offence punishable with imprisonment for a term________

A) exceeding three months
B) exceeding six months
C) exceeding one year
D) any summons case

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 259ರ ಅಡಿಯಲ್ಲಿ ಒಂದು ಸಮನ್ಸ್ ಮೊಕದ್ದಮೆಯನ್ನು ವಾರಂಟ್ ಮೊಕದ್ದಮೆಯನ್ನಾಗಿ ಪರಿವರ್ತಿಸುವ ಅಧಿಕಾರವನ್ನು ಚಲಾಯಿಸಲು ಆ ಸಮನ್ಸ್ ಮೊಕದ್ದಮೆಯು ________ ಅವಧಿಯ ಕಾರವಾಸದಿಂದ ಶಿಕ್ಷಾರ್ಹವಾಗಿರುವ ಅಪರಾಧಕ್ಕೆ ಸಂಬಂಧಿಸಿದ್ದಾಗಿರಬೇಕು.

ಎ) ಮೂರು ತಿಂಗಳಿಗೆ ಮೀರಿದ
ಬಿ) ಆರು ತಿಂಗಳಿಗೆ ಮೀರಿದ
ಸಿ) ಒಂದು ವರ್ಷಕ್ಕೆ ಮೀರಿದ
ಡಿ) ಯಾವುದೇ ಸಮನ್ಸ್ ಮೊಕದ್ದಮೆ

82 Power of the Court to enforce the execution of a decree is stipulated in:
A) Section 52 of the Code of Civil Procedure, 1908
B) Section 51 of the Code of Civil Procedure, 1908
C) Section 50 of the Code of Civil Procedure, 1908
D) Section 49 of the Code of Civil Procedure, 1908

ಡಿಕ್ರಿಯನ್ನು ಅಮಲ್ಜಾರಿಗೊಳಿಸುವ ನ್ಯಾಯಾಲಯದ ಅಧಿಕಾರವನ್ನು ನಿಗಧಿ ಪಡಿಸಿರುವುದು:
ಎ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 52
ಬಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 51
ಸಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 50
ಡಿ) ದಿವಾಣಿ ಪ್ರಕ್ರಿಯಾ ಸಂಹಿತೆ, 1908ರ ಕಲಂ 49

83 As per Section 372 of the Code of Criminal Procedure 1973, victim shall have a right to prefer an appeal:
A) only when the accused is acquitted.
B) only when accused is convicted for a lessor offence.
C) only when inadaquate compensation is imposed.
D) under any of the above circumstances.

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 372ರ ಪ್ರಕಾರ, ನೊಂದ ವ್ಯಕ್ತಿಗೆ ಮೇಲ್ಮನವಿ ಸಲ್ಲಿಸುವ ಹಕ್ಕು ಇರುವುದು:
ಎ) ಆರೋಪಿಯನ್ನು ಅಪರಾಧದಿಂದ ಬಿಡುಗಡೆಗೊಳಿಸಿದಾಗ ಮಾತ್ರ
ಬಿ) ಆರೋಪಿಯನ್ನು ಕಡಿಮೆ ಅಪರಾಧಕ್ಕೆ ಶಿಕ್ಷಿಸಿದಾಗ ಮಾತ್ರ
ಸಿ) ಅಸಮರ್ಪಕ ಪರಿಹಾರವನ್ನು ಆದೇಶಿಸಿದಾಗ ಮಾತ್ರ
ಡಿ) ಮೇಲಿನ ಯಾವುದೇ ಸಂದರ್ಭಗಳಲ್ಲಿ

84 "Socialist" and "Secular" words were added to the Preamble of the Indian Constitution by ________
A) 48th Amendment
B) 42nd Amendment
C) 45th Amendment
D) 44th Amendment

ಭಾರತೀಯ ಸಂವಿಧಾನದ ಪೀಠಿಕೆಗೆ "ಸಮಾಜವಾದಿ" ಮತ್ತು "ಜಾತ್ಯತೀತ" ಪದಗಳನ್ನು ಸೇರಿಸಿದ್ದು ______ ಮೂಲಕ.
ಎ) 48ನೇ ತಿದ್ದುಪಡಿ
ಬಿ) 42ನೇ ತಿದ್ದುಪಡಿ
ಸಿ) 45ನೇ ತಿದ್ದುಪಡಿ
ಡಿ) 44ನೇ ತಿದ್ದುಪಡಿ

85 As per Section 66 of the Karnataka Court Fees and Suit Valuation Act, 1958, when any suit is dismissed as settled out of Court before recording any evidence on the merits of the claim, ________ shall be refunded.
A) 25% of the court fee paid
B) 50% of the court fee paid
C) 75% of the court fee paid
D) Full court fee paid

ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವಾ ಮೌಲ್ಯಮಾಪನ ಕಾಯಿದೆ, 1958ರ ಕಲಂ 66ರ ಪ್ರಕಾರ ಯಾವುದೇ ದಾವೆಯನ್ನು ಹಕ್ಕಿನ ಅರ್ಹತೆಯ ಬಗ್ಗೆ ಯಾವುದೇ ಸಾಕ್ಷಿ ವಿಚಾರಣೆ ದಾಖಲು ಮಾಡುವ ಮೊದಲು ನ್ಯಾಯಾಲಯದ ಹೊರಗಡೆ ರಾಜಿಯಾಗಿರುವ ಕಾರಣ ವಜಾ ಮಾಡಿದಲ್ಲಿ ______ನ್ನು ಮರುಪಾವತಿ ಮಾಡತಕ್ಕದ್ದು.
ಎ) ಪಾವತಿ ಮಾಡಿರುವ ನ್ಯಾಯಾಲಯ ಶುಲ್ಕದ ಶೇ.25ರಷ್ಟು
ಬಿ) ಪಾವತಿ ಮಾಡಿರುವ ನ್ಯಾಯಾಲಯ ಶುಲ್ಕದ ಶೇ.50ರಷ್ಟು
ಸಿ) ಪಾವತಿ ಮಾಡಿರುವ ನ್ಯಾಯಾಲಯ ಶುಲ್ಕದ ಶೇ.75ರಷ್ಟು
ಡಿ) ಪಾವತಿ ಮಾಡಿರುವ ಪೂರ್ಣ ನ್ಯಾಯಾಲಯ ಶುಲ್ಕ

86 If a Hindu has left no heir qualified to succeed his property in accordance with the provisions of Hindu Succession Act, 1956, such property shall devolve on the Government. This is known as __________

A) Lapsing of estate
B) Residue
C) Escheat
D) none of the above

ಓರ್ವ ಹಿಂದುವಿಗೆ ಆತನ ಆಸ್ತಿಗೆ ಉತ್ತರವರ್ತಿಯಾಗಿ ಹಿಂದು ಉತ್ತರಾಧಿಕಾರ ಅಧಿನಿಯಮ, 1956ರ ಪ್ರಕಾರ ಯಾರೊಬ್ಬರು ವಾರಸುದಾರರು ಇಲ್ಲದೆ ಇದ್ದಲ್ಲಿ ಅಂತಹ ಆಸ್ತಿಯು ಸರ್ಕಾರಕ್ಕೆ ಸೇರುತ್ತದೆ. ಇದನ್ನು ______ ಎನ್ನುತ್ತಾರೆ.

ಎ) ಲಾಪ್ಸಿಂಗ್ ಆಫ್ ಎಸ್ಟೇಟ್
ಬಿ) ರೆಸಿಡ್ಯು
ಸಿ) ಎಸ್ಚೀಟ್
ಡಿ) ಮೇಲಿನ ಯಾವುದು ಅಲ್ಲ

87 Which Section of the Limitation Act, 1963 says that in computing the period of limitation for filing an appeal, time required for obtaining the certified copy of the judgment shall be excluded?
A) Section 15
B) Section 14
C) Section 13
D) Section 12

ಕಾಲಮಿತಿ ಅಧಿನಿಯಮ, 1963ರ ಯಾವ ಕಲಂ ಮೇಲ್ಮನವಿಯನ್ನು ಸಲ್ಲಿಸಲು ಕಾಲ ಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಾಗ ತೀರ್ಪಿನ ದೃಢೀಕೃತ ನಕಲನ್ನು ಪಡೆದುಕೊಳ್ಳಲು ತೆಗೆದುಕೊಂಡ ಸಮಯವನ್ನು ಕಳೆಯತಕ್ಕದ್ದು ಎಂದು ಹೇಳುತ್ತದೆ?
ಎ) ಕಲಂ 15
ಬಿ) ಕಲಂ 14
ಸಿ) ಕಲಂ 13
ಡಿ) ಕಲಂ 12

88 The offence of voyeurism is punishable under ______ of Indian Penal Code.
A) Section 354A
B) Section 354B
C) Section 354C
D) Section 354D

ಲೈಂಗಿಕ ದರ್ಶನದ ಅಪರಾಧ ಭಾರತೀಯ ದಂಡ ಸಂಹಿತೆಯ __________ ಅಡಿಯಲ್ಲಿ ಶಿಕ್ಷಾರ್ಹವಾಗಿದೆ.
ಎ) ಕಲಂ 354ಎ
ಬಿ) ಕಲಂ 354ಬಿ
ಸಿ) ಕಲಂ 354ಸಿ
ಡಿ) ಕಲಂ 354ಡಿ

89 A' owns a ferocious dog, which was not properly chained, due to which, it attacked the neighbour, who sustained grevious injury. 'A' ________
A) committed no offence
B) committed offence under Section 289 of the Indian Penal Code
C) committed offence under Section 324 of the Indian Penal Code
D) committed offence under Section 326 of the Indian Penal Code

'ಎ' ಯ ಬಳಿ ಒಂದು ಉಗ್ರವಾದ ನಾಯಿ ಇದ್ದು ಅದನ್ನು ಸರಿಯಾಗಿ ಸರಪಳಿ ಹಾಕಿಲ್ಲವಾದ್ದರಿಂದ ಅದು ನೆರೆಯವನ ಮೇಲೆ ದಾಳಿ ಮಾಡಿ ಆತನಿಗೆ ಗಂಭೀರ ಸ್ವರೂಪದ ಗಾಯ ಉಂಟು ಮಾಡಿತ್ತು. 'ಎ' ಯು ________
ಎ) ಯಾವುದೇ ಅಪರಾಧ ಮಾಡಿಲ್ಲ
ಬಿ) ಭಾರತೀಯ ದಂಡ ಸಂಹಿತೆಯ ಕಲಂ 289ರ ಅಡಿಯಲ್ಲಿ ಅಪರಾಧ ಮಾಡಿರುತ್ತಾನೆ

ಸಿ) ಭಾರತೀಯ ದಂಡ ಸಂಹಿತೆಯ ಕಲಂ 324ರ ಅಡಿಯಲ್ಲಿ ಅಪರಾಧ ಮಾಡಿರುತ್ತಾನೆ
ಡಿ) ಭಾರತೀಯ ದಂಡ ಸಂಹಿತೆಯ ಕಲಂ 326ರ ಅಡಿಯಲ್ಲಿ ಅಪರಾಧ ಮಾಡಿರುತ್ತಾನೆ

90 Under Section 258 of the Code of Criminal Procedure, 1973, proceedings can be stopped ________
A) in a summons case instituted otherwise than upon a complaint
B) in a summons case instituted upon a complaint
C) in a warrant case instituted upon a complaint
D) in a warrant case instituted otherwise than upon a complaint

ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 258ರ ಅಡಿಯಲ್ಲಿ ________ ಕಲಾಪಗಳನ್ನು ನಿಲ್ಲಿಸಬಹುದು.
ಎ) ಫಿರ್ಯಾದಿಯ ಮೇಲಲ್ಲದೆ ಅನ್ಯಥಾ ಹೂಡಲಾದ ಸಮನ್ಸ್ ಮೊಕದ್ದಮೆಗಳ
ಬಿ) ಫಿರ್ಯಾದಿಯ ಮೇಲೆ ಹೂಡಲಾದ ಸಮನ್ಸ್ ಮೊಕದ್ದಮೆಗಳ
ಸಿ) ಫಿರ್ಯಾದಿಯ ಮೇಲೆ ಹೂಡಲಾದ ವಾರಂಟು ಮೊಕದ್ದಮೆಗಳ
ಡಿ) ಫಿರ್ಯಾದಿಯ ಮೇಲಲ್ಲದೆ ಅನ್ಯಥಾ ಹೂಡಲಾದ ವಾರಂಟು ಮೊಕದ್ದಮೆಗಳ

91 Who is the present Defence Minister in the Union Cabinet?
A) Sri Rajanath Singh
B) Sri Amit Shah
C) Smt. Nirmala Sitharaman
D) none of the above

ಕೇಂದ್ರ ಸಚಿವ ಸಂಪುಟದಲ್ಲಿ ಈಗಿನ ರಕ್ಷಣಾ ಸಚಿವರು ಯಾರು?
ಎ) ಶ್ರೀ ರಾಜನಾಥ್ ಸಿಂಗ್
ಬಿ) ಶ್ರೀ ಅಮಿತ್ ಶಾ
ಸಿ) ಶ್ರೀಮತಿ ನಿರ್ಮಲ ಸೀತರಾಮನ್
ಡಿ) ಮೇಲಿನ ಯಾರು ಅಲ್ಲ

92 A compromise entered in a representative suit without the leave of the Court shall be ______
A) valid
B) invalid
C) voidable
D) void

ನ್ಯಾಯಾಲಯದ ಅನುಮತಿ ಇಲ್ಲದೆ ಪ್ರತಿನಿಧಿ ದಾವೆಯಲ್ಲಿ ಮಾಡಿರುವ ರಾಜಿಯು ____________ ಆಗುತ್ತದೆ.
ಎ) ಮಾನ್ಯ
ಬಿ) ಅಮಾನ್ಯ
ಸಿ) ಶೂನ್ಯಗೊಳಿಸಬಹುದಾದ
ಡಿ) ಶೂನ್ಯ

93 As per the Transfer of Property Act, 1882 where one of the several donees does not accept the gift, such gift is ____________

A) Void in total
B) Voidable at the option of other donees
C) Void only to the extent of his part of interest
D) None of the above

ಸ್ವತ್ತು ವರ್ಗಾವಣೆ ಅಧಿನಿಯಮ, 1882ರ ಪ್ರಕಾರ ದಾನ ಪಡೆಯುವ ಹಲವರ ಪೈಕಿ ಒಬ್ಬರು ದಾನವನ್ನು ಅಂಗೀಕರಿಸದಿದ್ದಲ್ಲಿ ಅಂತಹ ದಾನವು __________

ಎ) ಸಂಪೂರ್ಣವಾಗಿ ಶೂನ್ಯ
ಬಿ) ಇತರ ದಾನ ಪಡೆಯುವವರ ಆಯ್ಕೆಯ ಪ್ರಕಾರ ಶೂನ್ಯಗೊಳಿಸಬಹುದಾಗಿದ್ದು
ಸಿ) ಅವರ ಹಿತಾಸಕ್ತಿಗೆ ಸಂಬಂಧಿಸಿದಂತೆ ಮಾತ್ರ ಶೂನ್ಯ
ಡಿ) ಮೇಲಿನ ಯಾವುದು ಅಲ್ಲ

94 Which one of the following is incorrect combination as per the Karnataka Rent Act, 1999?

A) Section 27(2)(a) – Eviction on the ground of arrears of rent
B) Section 27(2)(b) – Eviction on the ground of subletting
C) Section 27(2)(c) – Eviction on the ground of causing substantial damage to the premises
D) Section 27(2)(d) – Eviction on the ground of tenant not occupying the premises

ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ಪ್ರಕಾರ ಈ ಕೆಳಗಿನ ಪೈಕಿ ಯಾವುದೊಂದು ಸರಿಯಾದ ಹೊಂದಾಣಿಕೆಯಾಗಿರುವುದಿಲ್ಲ?

ಎ) ಕಲಂ 27(2)(ಎ) – ಬಾಡಿಗೆ ಬಾಕಿಯ ಕಾರಣ ಆಸ್ತಿಯಿಂದ ಖುಲ್ಲಾ ಮಾಡುವುದು
ಬಿ) ಕಲಂ 27(2)(ಬಿ) – ಪುನರ್ ಬಾಡಿಗೆ ಕೊಟ್ಟ ಕಾರಣ ಆಸ್ತಿಯಿಂದ ಖುಲ್ಲಾ ಮಾಡುವುದು
ಸಿ) ಕಲಂ 27(2)(ಸಿ) – ಕಟ್ಟಡಕ್ಕೆ ಸಾಕಷ್ಟು ಹಾನಿ ಮಾಡಿರುವ ಕಾರಣ ಆಸ್ತಿಯಿಂದ ಖುಲ್ಲಾ ಮಾಡುವುದು
ಡಿ) ಕಲಂ 27(2)(ಡಿ) – ಬಾಡಿಗೆದಾರನು ಕಟ್ಟಡದಲ್ಲಿ ವಾಸ ಮಾಡದೇ ಇರುವ ಕಾರಣ ಆಸ್ತಿಯಿಂದ ಖುಲ್ಲಾ ಮಾಡುವುದು

95 Which one of the following decision led to the First amendment to the Constitution of India for inserting clause (4) to Article 15?

A) Minerva Mills vs Union of India
B) Golaknath vs State of Punjab
C) Kesavananda Bharati vs State of Kerala
D) Champakam Dorairajan vs State of Madras

ಈ ಕೆಳಗಿನ ಪೈಕಿ ಯಾವುದೊಂದು ತೀರ್ಪು ಭಾರತೀಯ ಸಂವಿಧಾನಕ್ಕೆ ಮೊದಲನೆ ತಿದ್ದುಪಡಿಯ ಮೂಲಕ ಅನುಚ್ಛೇಧ 15ಕ್ಕೆ ಖಂಡ(4)ನ್ನು ಸೇರಿಸಲು ದಾರಿ ಮಾಡಿಕೊಟ್ಟಿತ್ತು?

ಎ) ಮಿನರ್ವ ಮಿಲ್ಸ್ ವಿರುದ್ಧ ಯೂನಿಯನ್ ಆಫ್ ಇಂಡಿಯ
ಬಿ) ಗೋಲಕ್‌ನಾಥ್ ವಿರುದ್ಧ ಪಂಜಾಬ್ ರಾಜ್ಯ

ಸಿ) ಕೇಶವಾನಂದ ಭಾರತಿ ವಿರುದ್ಧ ಕೇರಳ ರಾಜ್ಯ
ಡಿ) ಚಂಪಕಮ್ ದೊರೈರಾಜನ್ ವಿರುದ್ಧ ಮದ್ರಾಸ್ ರಾಜ್ಯ

96 Which two teams are clashing for the title in the finals of the FIFA Football World Cup 2022 tonight in Qatar?
A) Argentina and France
B) Crotia and Morocco
C) Argentina and Morocco
D) Crotia and France

ಈ ರಾತ್ರಿ ಕತಾರ್‌ನಲ್ಲಿ ನಡೆಯಲಿರುವ ಫೀಫಾ ಫುಟ್‌ಬಾಲ್ ವಿಶ್ವಕಪ್ 2022ರ ಅಂತಿಮ ಪಂದ್ಯದಲ್ಲಿ ಪ್ರಶಸ್ತಿಗಾಗಿ ಸೆಣಸಾಡಲಿರುವ ಎರಡು ತಂಡಗಳು ಯಾವುವು?
ಎ) ಅರ್ಜೆಂಟೀನ ಮತ್ತು ಫ್ರಾನ್ಸ್
ಬಿ) ಕ್ರೊವೇಷಿಯ ಮತ್ತು ಮೊರಾಕ್ಕೊ
ಸಿ) ಅರ್ಜೆಂಟೀನ ಮತ್ತು ಮೊರಾಕ್ಕೊ
ಡಿ) ಕ್ರೊವೇಷಿಯ ಮತ್ತು ಫ್ರಾನ್ಸ್

97 Dr. Justice D.Y.Chandrachud is the _____Chief Justice of India.
A) 50th
B) 49th
C) 48th
D) 47th

ಡಾ. ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್‌ರವರು ಭಾರತದ __________ ಮುಖ್ಯ ನ್ಯಾಯಮೂರ್ತಿ.
ಎ) 50ನೇ
ಬಿ) 49ನೇ
ಸಿ) 48ನೇ
ಡಿ) 47ನೇ

98 "Public Trust Doctrine" pertains to _____
A) Indian Trust Act
B) Karnataka Public Trust Act
C) Environmental Law
D) none of the above

"ಸಾರ್ವಜನಿಕ ನಂಬಿಕೆಯ ಸಿದ್ಧಾಂತ" __________ಗೆ ಸಂಬಂಧಿಸಿದ್ದು.
ಎ) ಭಾರತೀಯ ನ್ಯಾಸ ಕಾಯಿದೆ
ಬಿ) ಕರ್ನಾಟಕ ಸಾರ್ವಜನಿಕ ನ್ಯಾಸ ಕಾಯಿದೆ
ಸಿ) ಪರಿಸರ ಕಾನೂನು
ಡಿ) ಮೇಲಿನ ಯಾವುದು ಅಲ್ಲ

99 In respect of which one of the following offence, presumption as provided under Section 20 of the Prevention of Corruption Act, 1988, is not available?

A) Taking gratification, an offence under Sec.7 of the said Act
B) Obtaining valuable thing without consideration, an offence under Sec.11 of the said Act
C) Habitually accepting gratification, an offence under Sec.13 (1)(a) of the said Act
D) Having property disproportionate to his known source of income, an offence under Sec.13(1)(e) of the said Act

ಈ ಕೆಳಗಿನ ಯಾವುದೊಂದು ಅಪರಾಧಕ್ಕೆ ಭ್ರಷ್ಟಚಾರ ನಿರ್ಮೂಲನಾ ಕಾಯಿದೆ, 1988ರ ಕಲಂ 20ರ ಅಡಿಯಲ್ಲಿ ಒದಗಿಸಿರುವ ಪೂರ್ವಭಾವನೆ ಲಭ್ಯವಿರುವುದಿಲ್ಲ?
ಎ) ಆ ಕಾಯಿದೆಯ ಕಲಂ 7ರ ಅಡಿಯಲ್ಲಿ ಅಪರಾಧವಾಗಿರುವ, ಲಂಚ ಸ್ವೀಕಾರ
ಬಿ) ಆ ಕಾಯಿದೆಯ ಕಲಂ 11ರ ಅಡಿಯಲ್ಲಿ ಅಪರಾಧವಾಗಿರುವ, ಯಾವುದೇ ಪ್ರತಿಫಲ ನೀಡದೇ ಬೆಲೆಬಾಳುವ ವಸ್ತುಗಳನ್ನು ಪಡೆದುಕೊಳ್ಳುವುದು
ಸಿ) ಆ ಕಾಯಿದೆಯ ಕಲಂ 13(1)(ಎ) ಅಡಿಯಲ್ಲಿ ಅಪರಾಧವಾಗಿರುವ, ರೂಢಿಗತವಾಗಿ ಲಂಚವನ್ನು ಸ್ವೀಕರಿಸುವುದು
ಡಿ) ಆ ಕಾಯಿದೆಯ ಕಲಂ 13(1)(ಇ) ಅಡಿಯಲ್ಲಿ ಅಪರಾಧವಾಗಿರುವ, ತನಗೆ ತಿಳಿದಿರುವ ಆದಾಯದ ಮೂಲಕ್ಕೆ ಅಸಮಾನವಾಗಿ ಆಸ್ತಿಯನ್ನು ಹೊಂದಿರುವುದು

100 Which one of the following is not specifically defined in the Indian Evidence Act, 1872?
A) Document
B) Admission
C) Relevant
D) Confession

ಈ ಕೆಳಗಿನ ಪೈಕಿ ಯಾವುದೊಂದನ್ನು ಭಾರತೀಯ ಸಾಕ್ಷ್ಯ ಅಧಿನಿಯಮ, 1872ರಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸಿಲ್ಲ?
ಎ) ದಸ್ತಾವೇಜು
ಬಿ) ಸಮ್ಮತಿ
ಸಿ) ಸುಸಂಬದ್ಧ
ಡಿ) ತಪ್ಪೊಪ್ಪಿಗೆ

---------